ಇ) ವೈದ್ಯರುಗಳ ಕೊರತೆ ನೀಗಿಸುವ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿರುತ್ತದೆ?

ಮೆರಾಜುದ್ದೀನ್ ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು) :

ಅ) ಒಟ್ಟು 13 ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಪಶುಚಿಕಿತ್ಸಾಲಯಗಳು	6
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು	7
ಒಟ್ಟು	**13**

ಆ) ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪಶುವೈದ್ಯಕೀಯ ಸಂಸ್ಥೆಗಳು ಇರುತ್ತವೆ. ಡಾ॥ ಡಿ.ಎಂ. ನಂಜುಡಪ್ಪನವರ ಸಮಿತಿಯ ಪ್ರಾದೇಶಿಕ ಅಸಮತೋಲನ ವರದಿಯಲ್ಲಿ ಗುರುತಿಸಿರುವಂತೆ 39 ಅತಿ ಹಿಂದುಳಿದ ತಾಲ್ಲೂಕುಗಳನ್ನು ಹೊರತುಪಡಿಸಿ ಉಳಿದಡೆ ಹೊಸ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯುವ ಕಾರ್ಯಕ್ರಮ ರಾಜ್ಯದಲ್ಲಿ ಪ್ರಸ್ತುತ ಇರುವುದಿಲ್ಲ.

ಇ) ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಪಶುವೈದ್ಯಾಧಿಕಾರಿ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಪ್ರಕ್ರಿಯೇ ಪ್ರಾರಂಭಗೊಂಡಿದೆ. 250 ಪಶುವೈದ್ಯರನ್ನು ವಿಶೇಷ ನೇರ ನೇಮಕಾತಿ ಅಡಿಯಲ್ಲಿ ನೇಮ ಮಾಡಿಕೊಳ್ಳುವ ಪ್ರಕ್ರಿಯೇ ಅಂತಿಮ ಹಂತದಲ್ಲಿದೆ. ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯರ ಸೇವೆ ಸಕ್ರಮಗೊಳಿಸುವ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

2642 (2299) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) :- ಮಾನ್ಯ ಕೈಗಾರಿಕೆ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರದಲ್ಲಿ ಅಂತರಾಷ್ಟ್ರೀಯ ನಾಗರೀಕ ವಿಮಾನ ನಿಲ್ದಾಣವನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ;

ಆ) ಹಾಗಿದ್ದಲ್ಲಿ, ಅಂತರಾಷ್ಟ್ರೀಯ ನಾಗರೀಕ ನಿಲ್ದಾಣವನ್ನು ಯಾವಾಗ (ವಿಧಾನದಲ್ಲಿ) ಪ್ರಾರಂಭ ಮಾಡಲಾಗುತ್ತದೆ; ಹಾಗೂ ಇದರ ಅಂದಾಜು ವೆಚ್ಚವೆಷ್ಟು;

ಇ) ಇದರಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ಹಾಗೂ ಖಾಸಗಿ ಪಾಲುದಾರರ ಹೆಸರುಗಳೇನು ಹಾಗೂ ಎಷ್ಟು ಪ್ರಮಾಣದಲ್ಲಿ ಬಂಡವಾಳವನ್ನು ವಿನಿಯೋಗಿಸಲಾಗುತ್ತಿದೆ;

ಈ) ಇಲ್ಲಿಯವರೆಗೆ ಯಾರು ಯಾರು ಬಂಡವಾಳವನ್ನು ಹೂಡಿದ್ದಾರೆ (ಹೂಡಿರುವ ಬಂಡವಾಳದ ವಿವರ ಒದಗಿಸುವುದು);

ಉ) ಈ ಉದ್ದೇಶಿತ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೇಂದ್ರ ಸರ್ಕಾರ ಸಂಪೂರ್ಣ ಅನುಮತಿ ನೀಡಿದೆಯೇ:

ಊ) ಹಾಗಿದ್ದಲ್ಲಿ, ಈ ವಿಮಾನ ನಿಲ್ದಾಣದ ಕಾಮಗಾರಿಯನ್ನು ಯಾವಾಗಿ ಪ್ರಾರಂಭ ಮಾಡಲಾಗುವುದು ಹಾಗೂ ಪೂರ್ಣವಾಗುವುದು;

ಋ) ಈ ವಿಮಾನ ನಿಲ್ದಾಣಕ್ಕೆ ಕಾಯ್ದಿರಿಸಲಾಗಿರುವ ಭೂಮಿ ಎಷ್ಟು;

ಎ) ಆ ಪೈಕಿ ಸರ್ಕಾರಿ ಮತ್ತು ಖಾಸಗಿ ಜಮೀನೆಷ್ಟು ಹಾಗೂ ಖಾಸಗಿ ಜಮೀನನ್ನು ಖರೀದಿಸಲು ಸರ್ಕಾರದ ನಿರ್ಧರಿಸಿರುವ ಮೊತ್ತವೆಷ್ಟು (ಎಕರೆವಾರು ವಿವರ ಒದಗಿಸುವುದು)?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕೆ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಹೌದು ಬೆಂಗಳೂರಿನ ಸಮೀಪದ ದೇವನಹಳ್ಳಿ ಹತ್ತಿರ ಅಂತರಾಷ್ಟ್ರೀಯ ನಾಗರೀಕ ವಿಮಾನ ನಿಲ್ದಾಣವನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆ.

ಆ) ಏಪ್ರಿಲ್ 2005ರಲ್ಲಿ ಅಂತರಾಷ್ಟ್ರೀಯ ನಾಗರೀಕ ವಿಮಾನ ನಿಲ್ದಾಣದ ನಿರ್ಮಾಣ ಕಾರ್ಯವು ಪ್ರಾರಂಭವಾಗುವ ನಿರೀಕ್ಷೆ ಇದೆ. ಇದರ ಅಂದಾಜು ವೆಚ್ಚ ರೂ. 1411.79 ಕೋಟಿಗಳು.

ಇ) ಇದು ಒಂದು ಜಂಟಿ ಉದ್ಯಮ ಯೋಜನೆಯಾಗಿದ್ದು, ಇದರಲ್ಲಿ ಷೇರು ಬಂಡವಾಳದ ಪಾಲುಗೊಳ್ಳುವಿಕೆಯಂತೆ, ಭಾರತ ಸರ್ಕಾರದ ಪರವಾಗಿ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ, ರಾಜ್ಯ ಸರ್ಕಾರದ ಪರವಾಗಿ KSIIDC ಸಂಸ್ಥೆಯು ಮತ್ತು ಖಾಸಗಿ ಪಾಲುದಾರರುಗಳಾದ ಜರ್ಮನಿಯ ಸೀಮೆನ್ಸ್ ಯೋಜನೆ – ಉದ್ಯಮ GmbH ಸ್ವಿಡ್ಜರ್‌ಲ್ಯಾಂಡಿನ ಯಾನಿಕ್ ಜೂರಿಕ್ ವಿಮಾನ ನಿಲ್ದಾಣ, ಭಾರತದ L & T ಸಂಸ್ಥೆ ಇರುತ್ತವೆ. ಜರ್ಮನಿಯ ಸೀಮೆನ್ಸ್ ಯೋಜನೆ ಉದ್ಯಮ GmbH ಶೇ.40 ರಷ್ಟು, ಸ್ವಿಡ್ಜರ್‌ಲ್ಯಾಂಡಿನ ಯಾನಿಕ್ ಜೂರಿಕ್ ವಿಮಾನ ನಿಲ್ದಾಣ ಶೇ.17 ರಷ್ಟು ಭಾರತದ L & T ಸಂಸ್ಥೆಯು ಶೇ.17 ರಷ್ಟು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಶೇ. 13 ರಷ್ಟು ಮತ್ತು KSIIDC ಶೇ.13 ರಷ್ಟು ಪ್ರಮಾಣದಲ್ಲಿ ಬಂಡವಾಳವನ್ನು ವಿನಿಯೋಗಿಸಲಾಗಿದೆ.

ಈ) ಸಂದಾಯ ಬಂಡವಾಳ ಹಾಗೂ ಪಾಲುದಾರರು ಪಡೆದಿರುವ ಪಾಲು ಬಂಡವಾಳದ ಏದಿರಿನ ಮುಂಗಡ ಮೊತ್ತ ಈ ಕೆಳಗಿನಂತಿದೆ.

		ಲಕ್ಷಗಳಲ್ಲಿ
ಸರ್ಕಾರಿ ಪಾಲುದಾರರು	–	1450–00
ಖಾಸಗಿ ಪಾಲುದಾರರು	–	870–87

ಇದಲ್ಲದೆ ಖಾಸಗಿ ಪಾಲುದಾರರು ಹಾಗೂ ಸರ್ಕಾರಿ ಪಾಲುದಾರರು ಆಗಸ್ಟ್ 31, 2004ರವರೆಗೆ ಮಾಡಿರುವ ಅಭಿವೃದ್ಧಿ ವೆಚ್ಚ (ಆಡಿಟ್ ಆಗಿರುವ) ಈ ಕೆಳಕಂಡಂತಿದೆ.

ಖಾಸಗಿ ಪಾಲುದಾರರು	–	5300–00
ಸರ್ಕಾರಿ ಪಾಲುದಾರರು	–	800–00

ಉ) ಹೌದು.

ಊ) ಏಪ್ರಿಲ್ 2005 ರಲ್ಲಿ ವಿಮಾನ ನಿಲ್ದಾಣದ ಕಾಮಗಾರಿ ಪ್ರಾರಂಭವಾಗುವ ನಿರೀಕ್ಷೆ ಇದೆ. ಕಾಮಗಾರಿ ಪೂರ್ಣಗೊಳ್ಳಲು ಹಾಕಿಕೊಂಡಿರುವ ಕಾಲಮಿತಿ ಕೆಲಸ ಪ್ರಾರಂಭವಾದ ನಂತರ 33 ತಿಂಗಳು.

ಋ) ಈ ವಿಮಾನ ನಿಲ್ದಾಣಕ್ಕೆ ಸುಮಾರು 4000 ಎಕರೆ ಭೂಮಿ ಕಾಯ್ದಿರಿಸಲಾಗಿದೆ.

ಈ ಪೈಕಿ ಸರ್ಕಾರಿ ಮತ್ತು ಖಾಸಗಿ ಜಮೀನು ಕ್ರಮವಾಗಿ 1800 ಮತ್ತು 2200 ಎಕರೆಗಳು ಖಾಸಗಿ ಜಮೀನನ್ನು ಖರೀದಿಸಲು ಸರ್ಕಾರ ನಿರ್ಧರಿಸಿರುವ ಮೊತ್ತ ಎಕರೆ ಒಂದಕ್ಕೆ ಸರಾಸರಿ ರೂ. 5 ಲಕ್ಷಗಳು.

2643 (2305) ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ):– ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆಯಲ್ಲಿರುವ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ವಿವರಗಳೇನು;

ಆ) ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡುವ ದಿಶೆಯಲ್ಲಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾದ ಯೋಜನೆಗಳ ವಿವರಗಳೇನು;

ಇ) ಆಧುನಿಕ ತಂತ್ರಜ್ಞಾನದ ಪರಿಸರ ನಾಶವಿಲ್ಲದ ಕೈಗಾರಿಕೆಗಳನ್ನು ಜಿಲ್ಲೆಯಲ್ಲಿ ಪ್ರಾರಂಭಿಸಲು ಸರ್ಕಾರದ ಯೋಜನೆಗಳೇನು?